# ಗೋರಿ ಸಂದರ್ಶನ ಸುನ್ನತ್, ಆದರೆ...

زيارة القبور سنة، ولكن...

< الكنادي >

ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಮುನಜ್ಜಿದ್

الشيخ محمد بن صالح المنجد

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

ترجمة: محمد حمزة البتوري

مراجعة: أبو بكر نذير السلفي

# ಗೋರಿ ಸಂದರ್ಶನ ಸುನ್ನತ್, ಆದರೆ...

ಪ್ರಶ್ನೆ: ಗೋರಿ ಸಂದರ್ಶನ ಮಾಡುವುದು ಮತ್ತು ಅಲ್ಲಿ ನಮಾಝ್ ಮಾಡುವುದರ ವಿಧಿಯೇನು? ಭಾರತದಲ್ಲಿ ಉರುಸ್ ಎಂಬ ಒಂದು ಉತ್ಸವವನ್ನು ಗೋರಿಗಳ ಬಳಿ ನಡೆಸಲಾಗುತ್ತದೆ. ಅವುಗಳಲ್ಲಿ ಪಾಲ್ಗೊಳ್ಳಬಹುದೇ? ಗೋರಿಯಲ್ಲಿ ಮಲಗಿರುವ ವ್ಯಕ್ತಿ ಔಲಿಯಾ ಆಗಿದ್ದಾರೆ, ಅವರು ನಮ್ಮ ಪ್ರಾರ್ಥನೆಗಳನ್ನು ಅಲ್ಲಾಹನಿಗೆ ತಲುಪಿಸಿಕೊಡುತ್ತಾರೆ ಮತ್ತು ಸಜ್ಜನರ ಪ್ರಾರ್ಥನೆ ಬೇಗ ಸ್ವೀಕಾರವಾಗುತ್ತದೆಂದು ಕೆಲವರು ಹೇಳುತ್ತಾರೆ. ಈ ವಿಷಯದಲ್ಲಿ ಸ್ವಲ್ಪ ಬೆಳಕು ಚೆಲ್ಲುವಿರಾ? ಅಲ್ಲಾಹು ತಮಗೆ ಅತ್ಯುತ್ತಮ ಪ್ರತಿಫಲ ನೀಡಲಿ.

ಉತ್ತರ: ಸರ್ವಸ್ತುತಿಗಳು ಅಲ್ಲಾಹನಿಗೆ ಮಾತ್ರ ಮೀಸಲು.

**1. ಗೋರಿ ಸಂದರ್ಶನ:**

ಗೋರಿ ಸಂದರ್ಶನದಲ್ಲಿ ಎರಡು ವಿಧವಿದೆ:

ಮೊದಲನೆ ವಿಧ ಸುನ್ನತ್ ಆಗಿರುವ ಸಂದರ್ಶನ: ಇದು ಗೋರಿಯಲ್ಲಿರುವ ವ್ಯಕ್ತಿಗೆ ಪ್ರಾರ್ಥಿಸಲು, ಮರಣವನ್ನು ಜ್ಞಾಪಿಸಲು ಮತ್ತು ಪರಲೋಕಕ್ಕಾಗಿ ಸಿದ್ಧಗೊಳ್ಳಲು ಇರುವ ಸಂದರ್ಶನ. ಪ್ರವಾದಿ(ﷺ)ರವರು ಹೇಳಿದರು:

قال رَسُول اللَّهِ ﷺ: {زُورُوا الْقُبُورَ، فَإِنَّهَا تُذَكِّرُكُمُ الْآخِرَةَ} رواه مسلم.

"ಗೋರಿಗಳನ್ನು ಸಂದರ್ಶಿಸಿರಿ. ಅದು ನಿಮಗೆ ಪರಲೋಕವನ್ನು ಜ್ಞಾಪಿಸುತ್ತದೆ." [ಮುಸ್ಲಿಮ್ 976]

ಪ್ರವಾದಿ(ﷺ)ರವರು ಗೋರಿ ಸಂದರ್ಶನ ಮಾಡುತ್ತಿದ್ದರು. ಹಾಗೆಯೇ ಸಹಾಬಾಗಳು ಕೂಡ ಗೋರಿ ಸಂದರ್ಶನ ಮಾಡುತ್ತಿದ್ದರು.

ಆಯಿಶಾ(ರ) ಹೇಳುತ್ತಾರೆ:

{كَانَ رَسُولُ اللَّهِ ﷺ كُلَّمَا كَانَ لَيْلَتُهَا مِنْ رَسُولِ اللَّهِ ﷺ يَخْرُجُ مِنْ آخِرِ اللَّيْلِ إِلَى الْبَقِيعِ فَيَقُولُ: «السَّلَامُ عَلَيْكُمْ دَارَ قَوْمٍ مُؤْمِنِينَ وَأَتَاكُمْ مَا تُوعَدُونَ، غَدًا مُؤَجَّلُونَ، وَإِنَّا إِنْ شَاءَ اللَّهُ بِكُمْ لَاحِقُونَ، اللَّهُمَّ اغْفِرْ لِأَهْلِ بَقِيعِ الْغَرْقَدِ} مُتَّفَقٌ عَلَيهِ.

"ನನ್ನ ಸರದಿಯ ರಾತ್ರಿ ಬರುವಾಗಲೆಲ್ಲ ಪ್ರವಾದಿ(ﷺ)ರವರು ರಾತ್ರಿಯ ಕೊನೆಯ ಸಮಯದಲ್ಲಿ ಬಕೀಅ್‌ಗೆ ಹೋಗಿ ಅಲ್ಲಿ ಹೀಗೆನ್ನುತ್ತಿದ್ದರು: ಓ ಗೋರಿಗಳಲ್ಲಿರುವ ವಿಶ್ವಾಸಿಗಳೇ, ನಿಮಗೆ ವಾಗ್ದಾನ ಮಾಡಲ್ಪಟ್ಟದ್ದು ನಿಮಗೆ ಬೇಗನೇ ತಲುಪಿದೆ. ಅಲ್ಲಾಹು ಇಚ್ಛಿಸಿದರೆ ನಾವೂ ನಿಮ್ಮೊಂದಿಗೆ ಸೇರಿಕೊಳ್ಳುವೆವು. ಓ ಅಲ್ಲಾಹ್, ಬಕೀಅ್‌ನಲ್ಲಿರುವವರಿಗೆ ಕ್ಷಮಿಸು." [ಮುಸ್ಲಿಮ್ 974]

ಎರಡನೆ ವಿಧ ಬಿದ್‌ಅತ್ ಆಗಿರುವ ಸಂದರ್ಶನ:

ಇದು ಗೋರಿಯಲ್ಲಿರುವ ವ್ಯಕ್ತಿಯೊಂದಿಗೆ ಪ್ರಾರ್ಥಿಸಲು, ಅವರೊಂದಿಗೆ ಸಹಾಯ ಬೇಡಲು, ಅವರಿಗೆ ಬಲಿಯರ್ಪಿಸಲು, ಅವರಿಗೆ ಹರಕೆ ಹೊರಲು ಮಾಡುವ ಸಂದರ್ಶನ. ಇದು ನಿಷಿದ್ಧ ಮಾತ್ರವಲ್ಲ ಶಿರ್ಕ್ ಕೂಡ ಆಗಿದೆ. ಅದೇ ರೀತಿ ಗೋರಿಯ ಬಳಿ ಪ್ರಾರ್ಥಿಸಲು, ನಮಾಝ್ ಮಾಡಲು, ಕುರ್‌ಆನ್ ಪಾರಾಯಣ ಮಾಡಲು ಸಂದರ್ಶನ ಮಾಡುವುದು ಬಿದ್‌ಅತ್ ಆಗಿದೆ. ಶರೀಅತ್ ಅದನ್ನು ನಿರ್ದೇಶಿಸಿಲ್ಲ.

**2. ಗೋರಿಯ ಬಳಿ ನಮಾಝ್ ಮಾಡುವುದು:**

ಗೋರಿಯ ಬಳಿ ನಮಾಝ್ ಮಾಡುವುದು ಎಂಬುದರ ಉದ್ದೇಶ ಜನಾಝ ನಮಾಝ್ ಆಗಿದ್ದರೆ ಅದಕ್ಕೆ ಅನುಮತಿಯಿದೆ. ಅದು ನಿಷಿದ್ಧವಲ್ಲ. ಆದರೆ ಅದರ ಉದ್ದೇಶ ಇತರ ಫರ್ದ್ ಮತ್ತು ಸುನ್ನತ್ ನಮಾಝ್‌ಗಳಾಗಿದ್ದರೆ ಅದು ನಿಷಿದ್ಧ.

ಗೋರಿಗಳ ಬಳಿ ಜನಾಝ ನಮಾಝ್ ಮಾಡಬಹುದು ಎಂಬುದಕ್ಕೆ ಪುರಾವೆ:

ಅಬೂ ಹುರೈರಃ(ؓ) ಹೇಳುತ್ತಾರೆ:

أَنَّ رَجُلًا أَسْوَدَ أَوِ امْرَأَةً سَوْدَاءَ كَانَ يَقُمُّ الْمَسْجِدَ فَمَاتَ، فَسَأَلَ النَّبِيُّ ﷺ عَنْهُ فَقَالُوا: مَاتَ. قَالَ: {أَفَلَا كُنْتُمْ آذَنْتُمُونِي بِهِ؟ دَلُّونِي عَلَى قَبْرِهِ} أَوْ {قَبْرِهَا} فَأَتَى قَبْرَهَا فَصَلَّى عَلَيْهَا. مُتَّفَقٌ عَلَيهِ.

"ಒಮ್ಮೆ ಮಸೀದಿಯನ್ನು ಗುಡಿಸುತ್ತಿದ್ದ ಒಬ್ಬ ಕರಿಯ ವ್ಯಕ್ತಿ ಅಥವಾ ಕರಿಯ ಮಹಿಳೆ ಮೃತಪಟ್ಟರು. ಪ್ರವಾದಿ(ﷺ)ರವರು ಆ ವ್ಯಕ್ತಿಯ ಬಗ್ಗೆ ಕೇಳಿದಾಗ ಸಹಾಬಾಗಳು ಹೇಳಿದರು: ಅವರು ಮೃತಪಟ್ಟಿದ್ದಾರೆ. ಆಗ ಪ್ರವಾದಿ(ﷺ) ಹೇಳಿದರು: ನೀವೇಕೆ ನನಗೆ ಅದನ್ನು ತಿಳಿಸಲಿಲ್ಲ? ನನಗೆ ಆ ವ್ಯಕ್ತಿಯ ಅಥವಾ ಮಹಿಳೆಯ ಗೋರಿಯನ್ನು ತೋರಿಸಿರಿ. ಹೀಗೆ ಪ್ರವಾದಿ(ﷺ)ರವರು ಆ ಗೋರಿಯ ಬಳಿಗೆ ಬಂದು ಜನಾಝ ನಮಾಝ್ ನಿರ್ವಹಿಸಿದರು." [ಅಲ್‌ಬುಖಾರಿ 446; ಮುಸ್ಲಿಮ್ 956]

ಜನಾಝ ನಮಾಝ್ ಅಲ್ಲದ ನಮಾಝ್‌ಗಳನ್ನು ಗೋರಿಯ ಬಳಿ ನಿರ್ವಹಿಸಬಾರದು ಎಂಬುದಕ್ಕಿರುವ ಪುರಾವೆ:

ಎ. ಆಯಿಶಾ(ؓ) ಮತ್ತು ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್(ؓ) ಹೇಳುತ್ತಾರೆ:

لَمَّا نَزَلَ بِرَسُولِ اللَّهِ ﷺ طَفِقَ يَطْرَحُ خَمِيصَةً لَهُ عَلَى وَجْهِهِ، فَإِذَا اغْتَمَّ كَشَفَهَا عَنْ وَجْهِهِ فَقَالَ وَهُوَ كَذَلِكَ: {لَعْنَةُ اللَّهِ عَلَى الْيَهُودِ وَالنَّصَارَى اتَّخَذُوا قُبُورَ أَنْبِيَائِهِمْ مَسَاجِدَ} يُحَذِّرُ مِثْلَ مَا صَنَعُوا. مُتَّفَقٌ عَلَيهِ.

"ಪ್ರವಾದಿ(ﷺ)ರವರು ಮರಣಾಸನ್ನರಾಗಿದ್ದಾಗ ಅವರು ತಮ್ಮ ಮುಖದ ಮೇಲೆ ಒಂದು ಬಟ್ಟೆಯನ್ನು ಹಾಕುತ್ತಿದ್ದರು. ಉಸಿರು ಕಟ್ಟುವಂತಾದಾಗ ಅದನ್ನು ತೆಗೆಯುತ್ತಾ ಹೇಳಿದರು: ಯಹೂದರ ಮತ್ತು ಕ್ರೈಸ್ತರ ಮೇಲೆ ಅಲ್ಲಾಹನ ಶಾಪವಿದೆ. ಅವರು ತಮ್ಮ ಪ್ರವಾದಿಗಳ ಗೋರಿಗಳನ್ನು ಆರಾಧನಾಲಯಗಳನ್ನಾಗಿ ಮಾಡಿಕೊಂಡರು." ತಮ್ಮ ಸಮುದಾಯ ಕೂಡ ಹೀಗೆ ಮಾಡಬಾರದೆಂದು ಅವರು ಎಚ್ಚರಿಕೆ ನೀಡುತ್ತಿದ್ದರು." [ಅಲ್‌ಬುಖಾರಿ 460; ಮುಸ್ಲಿಮ್ 531]

ಬಿ. ಅಬೂ ಮರ್ಸದ್ ಅಲ್‌ಗನವೀ(ﷺ) ಹೇಳುತ್ತಾರೆ:

قال رَسُولِ اللَّهِ ﷺ: {لَا تَجْلِسُوا عَلَى الْقُبُورِ وَلَا تُصَلُّوا إِلَيْهَا} رواه مسلم.

"ಅಲ್ಲಾಹನ ರಸೂಲ್(ﷺ) ಹೇಳಿದರು: ನೀವು ಗೋರಿಯ ಮೇಲೆ ಕುಳಿತುಕೊಳ್ಳಬಾರದು ಮತ್ತು ಅದರ ಕಡೆಗೆ ನಮಾಝ್ ಮಾಡಬಾರದು." [ಮುಸ್ಲಿಮ್ 972]

**3. ಉರೂಸ್ ಆಚರಣೆ:**

ವಾರ್ಷಿಕ ಉರೂಸ್ ಆಚರಿಸುವ ಬಗ್ಗೆ ಹೇಳುವುದಾದರೆ, ಆ ಆಚರಣೆ ಅಲ್ಲಾಹೇತರರೊಂದಿಗೆ, ಪ್ರಾರ್ಥಿಸುವುದು, ಅವರಿಗೆ ಹರಕೆ ಸಲ್ಲಿಸುವುದು ಮೊದಲಾದ ಆರಾಧನೆಗಳನ್ನು ಒಳಗೊಂಡಿದ್ದರೆ, ಅಥವಾ ಉರೂಸಿನಲ್ಲಿ ಪಾಲ್ಗೊಳ್ಳುವವರು ಗೋರಿಯಲ್ಲಿರುವ ವ್ಯಕ್ತಿ ತಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸುವರು ಎಂಬ ನಂಬಿಕೆಯುಳ್ಳವಾಗಿದ್ದರೆ, ಅಥವಾ ಆ ಆಚರಣೆಯಲ್ಲಿ ಆಜ್ಞೋಲ್ಲಂಘನೆಗಳು ಮತ್ತು ನಿಷಿದ್ಧ ಕೃತ್ಯಗಳು ಜರುಗುತ್ತಿದೆಯೆಂದಾದರೆ ಅಂತಹ ಉರೂಸ್‌ಗಳಲ್ಲಿ ಪಾಲ್ಗೊಳ್ಳುವುದು ನಿಷಿದ್ಧ.

ಇನ್ನು ಇಂತಹ ಯಾವುದೂ ಇಲ್ಲದಿದ್ದರೂ ಸಹ ಉರೂಸ್‌ಗಳಲ್ಲಿ ಪಾಲ್ಗೊಳ್ಳಬಾರದು. ಯಾಕೆಂದರೆ ಅದು ಬಿದ್‌ಅತ್. ಉರೂಸ್‌ನ ಸಂದರ್ಭದಲ್ಲಿ ವಲಿಯ್ಯಿನ ಆತ್ಮ ಅಲ್ಲಿ ಹಾಜರಾಗುತ್ತದೆ ಎಂಬ ನಂಬಿಕೆ ನಿಷಿದ್ಧ ಬಿದ್‌ಅತ್‌ಗಳಲ್ಲಿ ಸೇರಿದ್ದು. ಉರೂಸ್‌ಗಳನ್ನು ನಿರಂತರ ಆಚರಿಸುವುದರಿಂದ ಅದು ಧರ್ಮದಲ್ಲಿ ಸೇರಿದ್ದೆಂಬ ನಂಬಿಕೆಯು ಜನಸಾಮಾನ್ಯರಲ್ಲಿ ಉಂಟಾಗುವ ಕಾರಣ ಉರೂಸ್‌ಗಳನ್ನು ವಿರೋಧಿಸುವುದು ಮತ್ತು ಅವುಗಳಲ್ಲಿ ಪಾಲ್ಗೊಳ್ಳದಿರುವುದು ಕಡ್ಡಾಯವಾಗಿದೆ.

**4. ಜೀವಂತವಿರುವ ಸಜ್ಜನ ವ್ಯಕ್ತಿಯಲ್ಲಿ ಪ್ರಾರ್ಥಿಸುವಂತೆ ಕೇಳಿಕೊಳ್ಳುವುದು:**

ಜೀವಂತವಿರುವ ಸಜ್ಜನ ವ್ಯಕ್ತಿಯೊಬ್ಬರಲ್ಲಿ ತನಗಾಗಿ ಪ್ರಾರ್ಥಿಸುವಂತೆ ಕೇಳಿಕೊಳ್ಳುವುದಕ್ಕೆ ಅನುಮತಿಯಿದೆ. ಇದಕ್ಕಿರುವ ಪುರಾವೆ:

ಎ. ಉಸ್ಮಾನ್ ಇಬ್ನ್ ಹನೀಫ್(ﷺ)ರವರು ಹೇಳುತ್ತಾರೆ:

أَنَّ رَجُلًا ضَرِيرَ الْبَصَرِ أَتَى النَّبِيَّ ﷺ فَقَالَ: ادْعُ اللَّهَ أَنْ يُعَافِيَنِي. قَالَ: {إِنْ شِئْتَ دَعَوْتُ لَكَ، وَإِنْ شِئْتَ أَخَّرْتُ ذَلِكَ فَهُوَ خَيْرٌ} فَقَالَ: ادْعُهُ. فَأَمَرَهُ أَنْ يَتَوَضَّأَ فَيُحْسِنَ وُضُوءَهُ، فَيُصَلِّيَ رَكْعَتَيْنِ...
رواه أحمد والترمذي وابن ماجه.

"ಒಮ್ಮೆ ಒಬ್ಬ ಅಂಧ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಬಂದು ಹೇಳಿದರು: ಅಲ್ಲಾಹು ನನಗೆ ದೃಷ್ಟಿ ನೀಡುವುದಕ್ಕಾಗಿ ಅವನೊಂದಿಗೆ ಪ್ರಾರ್ಥಿಸಿರಿ. ಪ್ರವಾದಿ(ﷺ) ಹೇಳಿದರು: "ನೀನಿಚ್ಛಿಸಿದರೆ ನಾನು ನಿನಗಾಗಿ ಪ್ರಾರ್ಥಿಸುತ್ತೇನೆ. ಅಥವಾ ನೀನಿಚ್ಛಿಸಿದರೆ ನಾನು ಅದನ್ನು ಮುಂದೂಡುತ್ತೇನೆ. ಅದು ನಿನಗೆ ಉತ್ತಮ. ಆ ವ್ಯಕ್ತಿ ಹೇಳಿದರು: ಪ್ರಾರ್ಥಿಸಿರಿ. ಆಗ ಪ್ರವಾದಿ(ﷺ) ಆ ವ್ಯಕ್ತಿಯೊಂದಿಗೆ ಸರಿಯಾದ ರೀತಿಯಲ್ಲಿ ವುದೂ ನಿರ್ವಹಿಸಿ ಎರಡು ರಕ್‌ಅತ್ ನಮಾಝ್ ನಿರ್ವಹಿಸುವಂತೆ ಹೇಳಿದರು..." [ಅಹ್ಮದ್ 4/138; ಅತ್ತಿರ್ಮಿದೀ 5/569; ಇಬ್ನ್ ಮಾಜ 1/441]

ಬಿ. ಅನಸ್(ﷺ) ಹೇಳುತ್ತಾರೆ:

بَيْنَمَا النَّبِيُّ ﷺ يَخْطُبُ يَوْمَ الْجُمُعَةِ إِذْ قَامَ رَجُلٌ فَقَالَ: يَا رَسُولَ اللَّهِ، هَلَكَ الْكُرَاعُ وَهَلَكَ الشَّاءُ فَادْعُ اللَّهَ أَنْ يَسْقِيَنَا فَمَدَّ يَدَيْهِ وَدَعَا. مُتَّفَقٌ عَلَيهِ.

"ಒಂದು ಶುಕ್ರವಾರ ಪ್ರವಾದಿ(ﷺ)ರವರು ಖುತುಬ ನಿರ್ವಹಿಸುತ್ತಿದ್ದಾಗ ಒಬ್ಬ ವ್ಯಕ್ತಿ ಎದ್ದು ನಿಂತು ಹೇಳಿದರು: ಓ ಅಲ್ಲಾಹನ ರಸೂಲರೇ, ಜಾನುವಾರುಗಳು ನಾಶವಾಗುತ್ತಿವೆ, ಕುರಿಗಳು ನಾಶವಾಗುತ್ತಿವೆ. ಮಳೆ ಸುರಿಸುವುದಕ್ಕಾಗಿ ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಆಗ ಪ್ರವಾದಿ(ﷺ)ರವರು ಕೈಗಳನ್ನೆತ್ತಿ ಪ್ರಾರ್ಥಿಸಿದರು." [ಅಲ್‌ಬುಖಾರಿ 890; ಮುಸ್ಲಿಮ್ 897]

**5. ಮೃತಪಟ್ಟ ಸಜ್ಜನ ವ್ಯಕ್ತಿಯಲ್ಲಿ ಪ್ರಾರ್ಥಿಸುವಂತೆ ಕೇಳಿಕೊಳ್ಳುವುದು:**

ಮೃತಪಟ್ಟ ಪ್ರವಾದಿ, ವಲಿಯ್ಯ್ ಮುಂತಾದವರಲ್ಲಿ ತನಗಾಗಿ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುವುದಕ್ಕೆ ಶರೀಅತ್ತಿನಲ್ಲಿ ಯಾವುದೇ ಆಧಾರವಿಲ್ಲ. ಯಾಕೆಂದರೆ ಇಹಲೋಕದೊಂದಿಗೆ ಅವರಿಗಿರುವ ಸಂಬಂಧ ಮರಣದೊಂದಿಗೆ ಕಡಿದುಹೋಗುತ್ತದೆ. ಈ ರೀತಿ ಪ್ರಾರ್ಥಿಸುವಂತೆ ಕೇಳಿಕೊಳ್ಳುವುದು ಶಿರ್ಕ್. ಸಹಾಬಾಗಳಾಗಲಿ, ಅವರನ್ನು ಅನುಸರಿಸಿದ ಸಜ್ಜನ ಇಮಾಮ್‌ಗಳಾಗಲಿ ಯಾರೂ ಇದನ್ನು ಮಾಡಿಲ್ಲ.

ಅಲ್ಲಾಹು ಹೇಳುತ್ತಾನೆ:

﴿وَمَنْ أَضَلُّ مِمَّن يَدْعُواْ مِن دُونِ ٱللَّهِ مَن لَّا يَسْتَجِيبُ لَهُۥٓ إِلَىٰ يَوْمِ ٱلْقِيَٰمَةِ وَهُمْ عَن دُعَآئِهِمْ غَٰفِلُونَ ۝٥ وَإِذَا حُشِرَ ٱلنَّاسُ كَانُواْ لَهُمْ أَعْدَآءً وَكَانُواْ بِعِبَادَتِهِمْ كَٰفِرِينَ ۝٦﴾ [الأحقاف: ٥-٦].

"ಅಲ್ಲಾಹನ ಹೊರತು ಪುನರುತ್ಥಾನ ದಿನದವರೆಗೆ ತನಗೆ ಉತ್ತರ ನೀಡದವರನ್ನು ಕರೆದು ಪ್ರಾರ್ಥಿಸುವವನಿಗಿಂತಲೂ ದೊಡ್ಡ ಪಥಭ್ರಷ್ಟನು ಇನ್ನಾರಿರುವನು? ಅವರು ಇವರ ಪ್ರಾರ್ಥನೆಯ ಬಗ್ಗೆ ಅಲಕ್ಷ್ಯರಾಗಿರುವರು. ಮನುಷ್ಯರನ್ನು ಒಟ್ಟುಗೂಡಿಸಲಾಗುವ ಸಂದರ್ಭದಲ್ಲಿ ಅವರು ಇವರ ಶತ್ರುಗಳಾಗುವರು. ಇವರು ಅವರ ಆರಾಧನೆ ಮಾಡಿರುವುದನ್ನು ಅವರು ನಿಷೇಧಿಸುವರು." [ಕುರ್ಆನ್ 46:5–6]

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ:

"ಮನುಷ್ಯನು ಬೇಡುವ ವಸ್ತು ಅಲ್ಲಾಹನಿಗೆ ಮಾತ್ರ ಸಾಮರ್ಥ್ಯವಿರುವ ವಿಷಯಗಳಲ್ಲಿ ಸೇರಿದ್ದಾಗಿದ್ದರೆ, ಉದಾಹರಣೆಗೆ ರೋಗ ವಾಸಿಯಾಗಲು, ಇಹಲೋಕ ಮತ್ತು ಪರಲೋಕದ ಸಂಕಷ್ಟಗಳಿಂದ ಪಾರು ಮಾಡಲು, ಶತ್ರುವಿನ ವಿರುದ್ಧ ಗೆಲುವು ನೀಡಲು, ಹೃದಯವನ್ನು ಸನ್ಮಾರ್ಗದಲ್ಲಿ ಮಾಡಲು, ಪಾಪಗಳನ್ನು ಕ್ಷಮಿಸಲು, ಸ್ವರ್ಗವನ್ನು ನೀಡಲು, ನರಕದಿಂದ ಪಾರು ಮಾಡಲು, ಇಲ್ಮ್ ಅಥವಾ ಕುರ್ಆನಿನ ಅರಿವು ಹೆಚ್ಚಿಸಲು, ಹೃದಯವನ್ನು ಸರಿಪಡಿಸಲು, ಸ್ವಭಾವವನ್ನು ಉತ್ತಮಗೊಳಿಸಲು, ಆತ್ಮವನ್ನು ಶುದ್ಧೀಕರಿಸಲು ಇತ್ಯಾದಿ ಅಲ್ಲಾಹನೊಂದಿಗೆ ಮಾತ್ರ ಬೇಡಬೇಕು. ಇಂತಹ ವಿಷಯಗಳನ್ನು ಅಲ್ಲಾಹು ಅಲ್ಲದವರೊಂದಿಗೆ ಬೇಡಬಾರದು, ಅದು ಪ್ರವಾದಿಯಾಗಿರಲಿ, ಮಲಕ್ ಆಗಿರಲಿ, ಶೈಖ್ ಆಗಿರಲಿ, ಅಥವಾ ಇನ್ನಿತರ ಯಾರೇ ಆಗಿರಲಿ, ಅವರೊಂದಿಗೆ ಬೇಡಬಾರದು. ಅವರು ಜೀವಂತವಿರುವವರಾದರೂ ಮರಣಹೊಂದಿದವರಾದರೂ ಸರಿ. ಯಾರಾದರೂ ಅಲ್ಲಾಹು ಅಲ್ಲದವರೊಂದಿಗೆ ಬೇಡುವುದಾದರೆ ಅವನು ಮುಶ್ರಿಕ್ ಆಗಿದ್ದಾನೆ. ಮಲಕ್‌ಗಳು, ಪ್ರವಾದಿಗಳು, ವಿಗ್ರಹಗಳು ಮೊದಲಾದವುಗಳೊಂದಿಗೆ ಪ್ರಾರ್ಥಿಸುತ್ತಿರುವ ಮುಶ್ರಿಕ್‌ಗಳೊಂದಿಗೆ ಅವನು ಸೇರುತ್ತಾನೆ." [ಮಜ್ಮೂಉಲ್ ಫತಾವಾ 27/67–68]

ಅವರು ಮುಂದುವರಿದು ಹೇಳುತ್ತಾರೆ:

"ಒಬ್ಬ ವ್ಯಕ್ತಿ ಪ್ರವಾದಿಯ ಅಥವಾ ಸಜ್ಜನ ವ್ಯಕ್ತಿಯ ಗೋರಿಯ ಬಳಿಗೆ ಬಂದು ಗೋರಿಯಲ್ಲಿರುವವರೊಂದಿಗೆ ಬೇಡಿದರೆ ಅಥವಾ ಸಹಾಯ ಕೇಳಿದರೆ ಅದನ್ನು ಮೂರು ವಿಧಗಳಲ್ಲಿ ವಿವರಿಸಬಹುದು:

1. ಗೋರಿಯಲ್ಲಿರುವ ವ್ಯಕ್ತಿಯೊಂದಿಗೆ ತನ್ನ ಬೇಡಿಕೆಯನ್ನು ಈಡೇರಿಸುವಂತೆ ಕೇಳುವುದು. ಉದಾಹರಣೆಗೆ, ರೋಗವನ್ನು ವಾಸಿ ಮಾಡಲು, ಸಾಲವನ್ನು ಸಂದಾಯ ಮಾಡಲು, ಶತ್ರುವನ್ನು ಶಿಕ್ಷಿಸಲು, ತನಗೆ ಮತ್ತು ಕುಟುಂಬದವರಿಗೆ ಆರೋಗ್ಯ ನೀಡಲು ಇತ್ಯಾದಿ ಅಲ್ಲಾಹನಿಗೆ ಮಾತ್ರ ಸಾಮರ್ಥ್ಯವಿರುವ ವಿಷಯಗಳನ್ನು ಕೇಳುವುದಾದರೆ, ಅದು ಸುಸ್ಪಷ್ಟ ಶಿರ್ಕ್ ಆಗಿದೆ. ಅದನ್ನು ಮಾಡುವ ವ್ಯಕ್ತಿಯೊಂದಿಗೆ ತೌಬಾ ಮಾಡಲು ಹೇಳಬೇಕು. ಮಾಡದಿದ್ದರೆ ಆತನನ್ನು ಕೊಲ್ಲಬೇಕು.

2. ಇನ್ನು ಒಂದು ವೇಳೆ, ನಾನು ಗೋರಿಯಲ್ಲಿರುವ ವ್ಯಕ್ತಿಯೊಂದಿಗೆ ಬೇಡುವುದು ನನ್ನ ಉದ್ದೇಶವನ್ನು ಈಡೇರಿಸಲು ಅಲ್ಲಾಹನ ಬಳಿ ಶಿಫಾರಸು ಮಾಡುವುದಕ್ಕಾಗಿದೆ. ದೊರೆಯ ಬಳಿ ಹೋಗಬೇಕಾದರೆ ಮಂತ್ರಿ ಅಥವಾ ದೊರೆಯ ಆಪ್ತರ ಮೂಲಕ ಮಾತ್ರ ಹೋಗಬಹುದು ಎಂಬಂತೆ ಇಲ್ಲಿ ನಾನು ಈ ಗೋರಿಯಲ್ಲಿರುವ ವ್ಯಕ್ತಿಯ ಮೂಲಕ ನನ್ನ ಉದ್ದೇಶವನ್ನು

ಅಲ್ಲಾಹನಿಗೆ ತಲುಪಿಸುತ್ತಿದ್ದೇನೆ ಎಂದು ಆತ ಹೇಳುವುದಾದರೆ, ಇಂತಹ ನಂಬಿಕೆ ಮುಶ್ರಿಕರ ಮತ್ತು ಕ್ರೈಸ್ತರ ನಂಬಿಕೆಯಾಗಿದೆ. ಯಾಕೆಂದರೆ ನಾವು ಪಾದ್ರಿಗಳನ್ನು ಮತ್ತು ಸನ್ಯಾಸಿಗಳನ್ನು ಇಟ್ಟುಕೊಂಡಿರುವುದು ನಮಗೆ ಶಿಫಾರಸು ಮಾಡುವುದಕ್ಕಾಗಿದೆ. ಇದೇ ವಿಷಯವನ್ನು ಅಲ್ಲಾಹು ಮುಶ್ರಿಕರ ಬಗ್ಗೆ ಹೇಳಿದ್ದಾನೆ:

﴿مَا نَعۡبُدُهُمۡ إِلَّا لِيُقَرِّبُونَآ إِلَى ٱللَّهِ زُلۡفَىٰٓ﴾ [الزمر: ٣].

"ಇವರು ನಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸುವರು ಎಂಬ ನಂಬಿಕೆಯಿಂದಲ್ಲದೆ ನಾವು ಇವರನ್ನು ಆರಾಧಿಸುತ್ತಿಲ್ಲ." [ಕುರ್‌ಆನ್ 39:3]

ಅಲ್ಲಾಹು ಹೇಳುತ್ತಾನೆ:

﴿أَمِ ٱتَّخَذُواْ مِن دُونِ ٱللَّهِ شُفَعَآءَۚ قُلۡ أَوَلَوۡ كَانُواْ لَا يَمۡلِكُونَ شَيۡـٔٗا وَلَا يَعۡقِلُونَ ٤٣ قُل لِّلَّهِ ٱلشَّفَٰعَةُ جَمِيعٗاۖ لَّهُۥ مُلۡكُ ٱلسَّمَٰوَٰتِ وَٱلۡأَرۡضِۖ ثُمَّ إِلَيۡهِ تُرۡجَعُونَ ٤٤﴾ [الزمر: ٤٣-٤٤].

"ಅಥವಾ ಅವರು ಅಲ್ಲಾಹನನ್ನು ಬಿಟ್ಟು ಬೇರೆಯವರನ್ನು ಶಿಫಾರಸುಗಾರರನ್ನಾಗಿ ಮಾಡಿಕೊಂಡಿರುವರೇ? (ಓ ಪ್ರವಾದಿಯವರೇ,) ಹೇಳಿರಿ: ಅವರು (ಶಿಫಾರಸುಗಾರರು) ಏನನ್ನೂ ಅಧೀನದಲ್ಲಿಟ್ಟುಕೊಳ್ಳದವರೂ, ಚಿಂತಿಸದವರೂ ಆಗಿದ್ದರೂ ನೀವು ಅವರನ್ನು ಶಿಫಾರಸುಗಾರರನ್ನಾಗಿ ಮಾಡಿಕೊಳ್ಳುವಿರಾ? ಹೇಳಿರಿ: ಶಿಫಾರಸುಗಳೆಲ್ಲವೂ ಇರುವುದು ಅಲ್ಲಾಹನಿಗೆ ಮಾತ್ರ. ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅವನದ್ದು. ನಂತರ ನೀವು ಅವನೆಡೆಗೇ ಮರಳಿಸಲ್ಪಡುವಿರಿ." [ಕುರ್‌ಆನ್ 39:43–44]

ಅಲ್ಲಾಹು ಹೇಳುತ್ತಾನೆ:

﴿مَا لَكُم مِّن دُونِهِۦ مِن وَلِيّٖ وَلَا شَفِيعٍۚ أَفَلَا تَتَذَكَّرُونَ ٤﴾ [السجدة: ٤].

"ಅಲ್ಲಾಹನ ಹೊರತು ನಿಮಗೆ ಯಾವುದೇ ರಕ್ಷಕರಾಗಲಿ ಶಿಫಾರಸುಗಾರರಾಗಲಿ ಇಲ್ಲ. ನೀವು ಚಿಂತಿಸುವುದಿಲ್ಲವೇ?" [ಕುರ್‌ಆನ್ 32:4]

ಅಲ್ಲಾಹು ಹೇಳುತ್ತಾನೆ:

﴿مَن ذَا ٱلَّذِي يَشۡفَعُ عِندَهُۥٓ إِلَّا بِإِذۡنِهِۦۚ﴾ [البقرة: ٢٥٥].

"ಅಲ್ಲಾಹನ ಅಪ್ಪಣೆಯಿಲ್ಲದೆ ಅವನ ಬಳಿ ಶಿಫಾರಸು ಮಾಡುವವರು ಯಾರು?" [ಕುರ್‌ಆನ್ 2:255]

ಈ ಆಯತ್‌ಗಳಲ್ಲಿ ಅಲ್ಲಾಹು ಅವನ ಮತ್ತು ಅವನ ಸೃಷ್ಟಿಗಳ ಮಧ್ಯೆಯಿರುವ ವ್ಯತ್ಯಾಸವನ್ನು ವಿವರಿಸಿದ್ದಾನೆ. ತಮ್ಮ ಮಧ್ಯೆಯಿರುವ ಹಿರಿಯ ಮಾನ್ಯ ವ್ಯಕ್ತಿಯ ಮೂಲಕ ಶಿಫಾರಸು ಮಾಡಿಸುವುದು ಲೋಕ ರೂಢಿ. ಆದರೆ ಅಲ್ಲಾಹನ ವಿಷಯದಲ್ಲಿ ಹಾಗಲ್ಲ. ಅಲ್ಲಾಹನ ಬಳಿ ಯಾರಾದರೂ ಶಿಫಾರಸು ಮಾಡಬೇಕಾದರೆ ಶಿಫಾರಸು ಮಾಡುವವರಿಗೆ ಅಲ್ಲಾಹನ ಅಪ್ಪಣೆಯ

ಅಗತ್ಯವಿದೆ. ಹಾಗೆ ಅವರು ಯಾರ ವಿಷಯದಲ್ಲಿ ಶಿಫಾರಸು ಮಾಡುತ್ತಾರೋ ಆ ವ್ಯಕ್ತಿಯ ಬಗ್ಗೆ ಶಿಫಾರಸು ಮಾಡಲೂ ಅಲ್ಲಾಹನ ಅಪ್ಪಣೆಯ ಅಗತ್ಯವಿದೆ. ಆದ್ದರಿಂದ ಇಲ್ಲಿ ಶಿಫಾರಸಿನ ಅಧಿಕಾರ ಸಂಪೂರ್ಣವಾಗಿ ಅಲ್ಲಾಹನ ಕೈಯಲ್ಲಿದೆ...

ಇನ್ನು ಕೆಲವು ದುರ್ಮಾರ್ಗಿಗಳು ಮತ್ತು ಅಜ್ಞಾನಿಗಳು ಹೇಳುತ್ತಾರೆ: ಅಂಬಿಯಾಗಳು ಮತ್ತು ಸಾಲಿಹೀನ್‌ಗಳು ನಮಗಿಂತಲೂ ಹೆಚ್ಚು ಅಲ್ಲಾಹನಿಗೆ ಸಮೀಪವಾಗಿದ್ದಾರೆ. ನಾವು ಅಲ್ಲಾಹನಿಂದ ಬಹಳ ದೂರವಿದ್ದೇವೆ. ಇವರ ಮೂಲಕವಲ್ಲದೆ ಅಲ್ಲಾಹನೊಂದಿಗೆ ಪ್ರಾರ್ಥಿಸುವ ಅರ್ಹತೆ ನಮಗಿಲ್ಲ. ಇಂತಹ ಮಾತುಗಳು ಮುಶ್ರಿಕರು ಹೇಳುವ ಮಾತುಗಳಾಗಿವೆ. ಯಾಕೆಂದರೆ ಅಲ್ಲಾಹು ಹೇಳುತ್ತಾನೆ:

﴿وَإِذَا سَأَلَكَ عِبَادِي عَنِّي فَإِنِّي قَرِيبٌ أُجِيبُ دَعْوَةَ الدَّاعِ إِذَا دَعَانِ﴾ [البقرة: ١٨٦].

"ನನ್ನ ದಾಸರು ನನ್ನ ಬಗ್ಗೆ ತಮ್ಮೊಂದಿಗೆ ಕೇಳಿದರೆ, ನಾನು ಬಹಳ ಹತ್ತಿರವಿದ್ದೇನೆ ಎಂದು ಅವರೊಂದಿಗೆ ಹೇಳಿರಿ. ನನ್ನಲ್ಲಿ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ಕೊಡುವೆನು." [ಕುರ್‌ಆನ್ 2:186]

ಒಮ್ಮೆ ಪ್ರವಾದಿ(ﷺ)ರವರು ಮತ್ತು ಸಹಾಬಾಗಳು ಪ್ರಯಾಣ ಮಾಡುತ್ತಿದ್ದಾಗ, ಸಹಾಬಾಗಳು ಗಟ್ಟಿಯಾಗಿ ತಕ್ಬೀರ್ ಹೇಳತೊಡಗಿದರು. ಆಗ ಪ್ರವಾದಿ(ﷺ) ಹೇಳಿದರು:

قال رَسُول اللَّهِ ﷺ: {يَا أَيُّهَا النَّاسُ، ارْبَعُوا عَلَى أَنْفُسِكُمْ، فَإِنَّكُمْ لَا تَدْعُونَ أَصَمَّ وَلَا غَائِبًا، بَلْ تَدْعُونَ سَمِيعًا قَرِيبًا، إِنَّ الَّذِي تَدْعُونَهُ أَقْرَبُ إِلَى أَحَدِكُمْ مِنْ عُنُقِ رَاحِلَتِهِ} رواه مسلم.

"ಓ ಜನರೇ, ನಿಮ್ಮ ಶರೀರಗಳ ಮೇಲೆ ಅನುಕಂಪ ತೋರಿಸಿರಿ. ನೀವು ಕರೆಯುತ್ತಿರುವುದು ಕಿವುಡನನ್ನೋ ಕಾಣೆಯಾದವನನ್ನೋ ಅಲ್ಲ. ಬದಲಾಗಿ ನೀವು ಕರೆಯುತ್ತಿರುವುದು ಎಲ್ಲವನ್ನೂ ಆಲಿಸುವವನನ್ನೂ ಮತ್ತು ಎಲ್ಲಕ್ಕಿಂತಲೂ ಹತ್ತಿರವಿರುವವನನ್ನಾಗಿದೆ. ನೀವು ಯಾರನ್ನು ಕರೆಯುತ್ತಿರುವಿರೋ ಅವನು ನಿಮ್ಮ ಒಂಟೆಯ ಕುತ್ತಿಗೆಗಿಂತಲೂ ನಿಮಗೆ ಹತ್ತಿರದಲ್ಲಿದ್ದಾನೆ."

ಅಲ್ಲಾಹು ಅವನ ಎಲ್ಲ ದಾಸರೊಂದಿಗೆ ನಮಾಝ್ ಮಾಡುವಂತೆ ಮತ್ತು ಅವನೊಂದಿಗೆ ಏಕಾಂತದಲ್ಲಿ ಸಂಭಾಷಣೆ ಮಾಡುವಂತೆ ಆಜ್ಞಾಪಿಸಿದ್ದಾನೆ. ಎಲ್ಲರೂ ತಮ್ಮ ನಮಾಝ್‌ಗಳಲ್ಲಿ ಹೀಗೆ ಹೇಳಬೇಕೆಂದು ಹೇಳಿದ್ದಾನೆ:

﴿إِيَّاكَ نَعْبُدُ وَإِيَّاكَ نَسْتَعِينُ ۝﴾ [الفاتحة: ٥].

"ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನೊಂದಿಗೆ ಮಾತ್ರ ಸಹಾಯ ಬೇಡುತ್ತೇವೆ." [ಕುರ್‌ಆನ್ 1:5]

ಮುಶ್ರಿಕರು ತಮ್ಮ ಆರಾಧ್ಯರ ಬಗ್ಗೆ ಹೀಗೆ ಹೇಳುತ್ತಾರೆಂದು ಅಲ್ಲಾಹು ಹೇಳಿದ್ದಾನೆ:

﴿مَا نَعۡبُدُهُمۡ إِلَّا لِيُقَرِّبُونَآ إِلَى ٱللَّهِ زُلۡفَىٰٓ﴾ [الزمر: ٣].

"ಇವರು ನಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸುವರು ಎಂಬ ನಂಬಿಕೆಯಿಂದಲ್ಲದೆ ನಾವು ಇವರನ್ನು ಆರಾಧಿಸುತ್ತಿಲ್ಲ." [ಕುರ್‌ಆನ್ 39:3]

ಅಲ್ಲಾಹು ಅಲ್ಲದವರೊಂದಿಗೆ ಪ್ರಾರ್ಥಿಸುವ ವ್ಯಕ್ತಿಯೊಂದಿಗೆ ನಾವು ಹೀಗೆ ಹೇಳುತ್ತೇವೆ:

ನೀನು ಯಾರನ್ನು ಕರೆದು ಪ್ರಾರ್ಥಿಸುತ್ತಿರುವೆಯೋ ಅವರು ನಿನ್ನ ಸ್ಥಿತಿಗತಿಯ ಬಗ್ಗೆ ಹೆಚ್ಚು ಅರಿವುಳ್ಳವರೂ, ನಿನ್ನ ಪ್ರಾರ್ಥನೆಗೆ ಉತ್ತರ ಕೊಡುವ ಸಾಮರ್ಥ್ಯವುಳ್ಳವರೂ, ಅಥವಾ ನಿನ್ನ ಮೇಲೆ ಹೆಚ್ಚು ಕರುಣೆಯುಳ್ಳವರೂ ಆಗಿದ್ದಾರೆಂದು ನಿನ್ನ ನಂಬಿಕೆಯಾದರೆ ಆ ನಂಬಿಕೆ ಅಜ್ಞಾನ, ದುರ್ಮಾರ್ಗ ಮತ್ತು ಅವಿಶ್ವಾಸವಾಗಿದೆ. ನೀನು ಕರೆದು ಪ್ರಾರ್ಥಿಸುವವರಿಗಿಂತಲೂ ಅಲ್ಲಾಹು ಹೆಚ್ಚು ಅರಿವುಳ್ಳವನು, ಸಾಮರ್ಥ್ಯವುಳ್ಳವನು ಮತ್ತು ಕರುಣೆ ತೋರುವವನು ಎಂದು ನೀನು ತಿಳಿದಿರುತ್ತಿದ್ದರೆ ಅಲ್ಲಾಹನನ್ನು ಬಿಟ್ಟು ಅವರೆಡೆಗೆ ನೀನು ತಿರುಗುತ್ತಿರಲಿಲ್ಲ...

ನೀನು ಯಾರನ್ನು ಕರೆದು ಪ್ರಾರ್ಥಿಸುತ್ತಿರುವೆಯೋ ಅವರು ಅಲ್ಲಾಹನಿಗೆ ನಿನಗಿಂತಲೂ ಹೆಚ್ಚು ಹತ್ತಿರದಲ್ಲಿರುವವರು, ಅಲ್ಲಾಹನ ಬಳಿ ನಿನಗಿಂತಲೂ ಉನ್ನತ ದರ್ಜೆಯನ್ನು ಹೊಂದಿದವರು ಎಂದು ನೀನು ಹೇಳುವುದು ಸರಿ. ಅದು ಸತ್ಯ. ಅವರು ನಿನಗಿಂತಲೂ ಹೆಚ್ಚು ಹತ್ತಿರವಾಗಿದ್ದರೆ ಮತ್ತು ನಿನಗಿಂತಲೂ ಉನ್ನತ ಪದವಿಯಲ್ಲಿದ್ದರೆ ಅದರ ಅರ್ಥ ಅಲ್ಲಾಹು ನಿನಗೆ ಕೊಡುವ ಪ್ರತಿಫಲಕ್ಕಿಂತಲೂ ಎಷ್ಟೋ ಹೆಚ್ಚು ಪ್ರತಿಫಲವನ್ನು ಅವರಿಗೆ ಕೊಡುತ್ತಾನೆ ಎಂದಾಗಿದೆಯೇ ಹೊರತು ನೀನು ಅಲ್ಲಾಹನೊಂದಿಗೆ ಪ್ರಾರ್ಥಿಸಿದರೆ ಅವನು ನಿನ್ನ ಪ್ರಾರ್ಥನೆಗೆ ಉತ್ತರ ಕೊಡುವುದಕ್ಕಿಂತ ಹೆಚ್ಚು ನೀನು ಅವರೊಂದಿಗೆ ಪ್ರಾರ್ಥಿಸಿದರೆ ಅವರು ನಿನಗೆ ಉತ್ತರ ಕೊಡುತ್ತಾರೆ ಎಂದಲ್ಲ. ಒಂದು ವೇಳೆ ನೀನು ಶಿಕ್ಷಾರ್ಹನಾಗಿದ್ದರೆ ಅಥವಾ ನಿನ್ನ ಪ್ರಾರ್ಥನೆಯಲ್ಲಿ ಅನ್ಯಾಯ ಅಥವಾ ದಬ್ಬಾಳಿಕೆಯಿದ್ದು ಅಲ್ಲಾಹು ನಿನ್ನ ಪ್ರಾರ್ಥನೆಯನ್ನು ತಿರಸ್ಕರಿಸಿದರೆ, ಪ್ರವಾದಿಗಳಾಗಲಿ ಸಜ್ಜನರಾಗಲಿ ನಿನ್ನ ಸಹಾಯಕ್ಕೆ ಬರಲಾರರು. ಯಾಕೆಂದರೆ ಅಲ್ಲಾಹು ಇಷ್ಟಪಡದ ಮತ್ತು ಅಲ್ಲಾಹನಿಗೆ ಕೋಪ ಬರಿಸುವ ಯಾವುದೇ ಕೃತ್ಯವನ್ನು ಅವರು ಮಾಡಲಾರರು. ಹೀಗಿರುವಾಗ ನಿನ್ನ ಮೇಲೆ ಕರುಣೆ ತೋರಲು ಮತ್ತು ನಿನ್ನ ಪ್ರಾರ್ಥನೆಯನ್ನು ಸ್ವೀಕರಿಸಲು ಹೆಚ್ಚು ಅರ್ಹನಾಗಿರುವವನು ಅಲ್ಲಾಹು ಮಾತ್ರ." [ಮಜ್ಮೂಉಲ್ ಫತಾವಾ 27/75–76]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين.

*********